# ಪ್ರಾಚೀನ ಸ್ಮಾರಕಗಳ ಸಂರಕ್ಷಣೆ

**ಪೀಠಿಕೆ:**

ಪ್ರಾಚೀನ ಸ್ಮಾರಕಗಳು ನಮ್ಮ ದೇಶದ ಸಾಂಸ್ಕೃತಿಕ, ಐತಿಹಾಸಿಕ ಮತ್ತು ವಾಸ್ತುಶಿಲ್ಪದ ವೈಭವವನ್ನು ಪ್ರತಿಬಿಂಬಿಸುತ್ತವೆ. ಇವು ನಮ್ಮ ದೇಶದ ಪ್ರಾಚೀನ ನಾಗರಿಕತೆ, ಕಲೆ, ಸಂಸ್ಕೃತಿ ಮತ್ತು ಜೀವನಶೈಲಿಯನ್ನು ಬಿಂಬಿಸುತ್ತವೆ. ಇವು ನಮ್ಮ ದೇಶದ ಹೆಮ್ಮೆ.

ಪ್ರಾಚೀನ ಎಂದರೆ ಪುರಾತನ. ಸ್ಮಾರಕಗಳು ಎಂದರೆ ವ್ಯಕ್ತಿ ಅಥವಾ ಘಟನೆಗಳನ್ನು ನೆನಪಿಸಲು ನಿರ್ಮಿಸಲಾದ ರಚನೆ. ಸಂರಕ್ಷಣೆ ಎಂದರೆ ರಕ್ಷಿಸುವುದು.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

**ವಿವರಣೆ :**

ರಾಜ ಮಹಾರಾಜರ ಕಟ್ಟಿರುವ ಅರಮನೆಗಳು ಹಾಗೂ ಕಟ್ಟಡಗಳು, ಯುದ್ಧೋಪಕರಣಗಳು, ನಾಣ್ಯಗಳು, ದೇವಾಲಯ, ಮಸೀದಿಗಳು, ಚರ್ಚುಗಳು,ಅರಮನೆ, ಸಾಂಸ್ಕೃತಿಕ ಕೊಡುಗೆ, ಮೂರ್ತಿಗಳು, ಶಿಲ್ಪಗಳು ಮುಂತಾದವುಗಳನ್ನು ಸ್ಮಾರಕಗಳು ಎಂದು ಕರೆಯಲಾಗುತ್ತದೆ. ಇಂದು ಕೆಲವು ಸ್ಮಾರಕಗಳು ಭೂಗತವಾಗಿದೆ. ಕೆಲವು ಸ್ಮಾರಕಗಳು ತುಂಡಾಗಿವೆ. ಈಗೀನ ಕಾಲದ ಆರ್ಥಿಕ ಬೆಳವಣಿಗೆಯಿಂದಾಗಿ ಪ್ರಾಚೀನ ಸ್ಮಾರಕಗಳ ಸಂರಕ್ಷಣೆ ಅಂತ್ಯವಾಗುತ್ತಿವೆ.

ವಿಜಯನಗರ ಸಾಮ್ರಾಜ್ಯದ ಬಗ್ಗೆ ತಿಳಿದುಕೊಳ್ಳಲು ಇತಿಹಾಸದ ಪುಸ್ತಕಗಳು ಇಂದಿಗೂ ಲಭ್ಯವಿದೆ ಮತ್ತು ಅದಕ್ಕೆ ಆಧಾರವಾಗಿರುವ ಪ್ರಾಚೀನ ಸ್ಮಾರಕಗಳು ಇಂದಿಗೂ ಕಾಣಲು ಸಿಗುತ್ತವೆ. ಹಾಳು ಹಂಪಿಯೆಂದೇ ಕರೆಯಲ್ಪಡುವ ನಮ್ಮ ಹಂಪಿಯಲ್ಲಿ ಹಳೆಯ ಸ್ಮಾರಕಗಳನ್ನು ಕಾಣಬಹುದು. ಬೇಲೂರು – ಹಳೇಬೀಡಿನ ಶಿಲ್ಪಕಲೆ, ವಾಸ್ತು ,ಸುಂದರವಾದ ಮೂರ್ತಿ ಇವೆಲ್ಲವು ಪ್ರಾಚೀನ ಸ್ಮಾರಕಗಳಿಗೆ ಸಾಕ್ಷಿಗಳಾಗಿವೆ. ಪ್ರಪಂಚದ ಏಳು ಅದ್ಭುತಗಳಲ್ಲಿ ತಾಜಮಹಲ್ ಕೂಡ ಒಂದಾಗಿದೆ. ಇದು ನಮಗೆಲ್ಲ ಹೆಮ್ಮೆಯ ವಿಷಯವಾಗಿದೆ.

ಹಲವು ಪ್ರಾಚೀನ ಸ್ಮಾರಕಗಳು - ದೆಹಲಿಯ ಕೆಂಪು ಕೋಟೆ, ತಾಜ್ ಮಹಲ್, ಜೈಪುರದ ಅರಮನೆ, ಕುತುಬ್ ಮಿನಾರ್, ಹಂಪಿ, ಬಾದಾಮಿ, ಐಹೊಳೆ, ಮೈಸೂರಿನ ಅರಮನೆ ಇತ್ಯಾದಿ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

ಪ್ರಾಚೀನ ಸ್ಮಾರಕಗಳು ನಮ್ಮ ದೇಶದ ಸಂಪತ್ತು ಮತ್ತು ನಮ್ಮ ನಾಗರಿಕತೆ ಪ್ರತಿಬಿಂಬಿಸುವ ಅಂಶಗಳು. ನಮ್ಮ ಹಿಂದಿನ ಕಾಲದ ಕಲೆ ಮತ್ತು ಚಿಂತನೆ, ಜ್ಞಾನ ಮತ್ತು ನಾಗರಿಕತೆ ಹೆಮ್ಮೆ ಪಡಲು ಸ್ಮಾರಕಗಳ ಸಂರಕ್ಷಣೆ ನಮಗೆ ಸಹಾಯ ಮಾಡುತ್ತವೆ. ಇತಿಹಾಸ ಪುರಾವೆಗಳು ಪ್ರಮುಖ ಮೂಲವಾಗಿ ಕಾರ್ಯನಿರ್ವಹಿಸುತ್ತವೆ. ಪ್ರವಾಸಿಗರನ್ನು ಆಕರ್ಷಿಸುತ್ತವೆ.

ಸ್ಮಾರಕಗಳ ನಿರ್ಮಾಣ ಕಷ್ಟಕರವಾಗಿರುತ್ತದೆ ಮತ್ತು ಸಾಕಷ್ಟು ಜನರ ಪರಿಶ್ರಮ ಇರುತ್ತದೆ. ಸ್ಮಾರಕಗಳನ್ನು ನಿರ್ಮಿಸಲು ಸುಮಾರು ವರ್ಷಗಳೇ

ಬೇಕಾಗುತ್ತದೆ. ಆದ್ದರಿಂದ ಅವು ಹೆಚ್ಚುಕಾಲ ಇರುತ್ತವೆ ಮತ್ತು ಇವು ಹಳೆಯ ನಾಗರಿಕತೆಯನ್ನು ತಿಳಿಯಲು ಸಹಾಯ ಮಾಡುತ್ತವೆ.

**ಉಪಸಂಹಾರ**

ಹವಾಮಾನ, ಭಯೋತ್ಪಾದಕ ದಾಳಿ, ಬೇಜಾವಾಬ್ದಾರಿಯುತ ನಾಗರಿಕರು, ಸ್ಮಾರಕಗಳನ್ನು ಗೌರವಿಸದೆ ಇರುವವರಿಂದ ಸ್ಮಾರಕಗಳನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಪ್ರಾಚೀನ ಅಥವಾ ಐತಿಹಾಸಿಕ ಕೇಂದ್ರಗಳಲ್ಲಿ ಹೆಚ್ಚು ಹೆಚ್ಚು ವಸ್ತುಗಳ ಸಂಗ್ರಹಾಲಯಗಳನ್ನು ನಿರ್ಮಿಸಬೇಕು. ಐತಿಹಾಸಿಕ ಸ್ಥಳಗಳಲ್ಲಿ ಜನವಸತಿಯನ್ನು ನಿಷೇಧಿಸಬೇಕು, ಕಠಿಣವಾದ ಕ್ರಮಗಳನ್ನು ಕೈಗೊಳ್ಳಬೇಕು. ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರಗಳು ಪ್ರಾಚೀನ ಸ್ಮಾರಕಗಳ ಸಂರಕ್ಷಣೆ ಕುರಿತು ಮಾಧ್ಯಮಗಳಲ್ಲಿ ಜಾಯಿರಾತು ನೀಡಬೇಕು. ಈ ರೀತಿ ಕಾರ್ಯಗಳಲ್ಲಿ ಹೆಚ್ಚಿನ ಅಸಕ್ತಿ ವಹಿಸಿ ಅಥವಾ ವಿಷೇಶ ಕಾಳಜಿ ವಹಿಸಿದವ ಅಧಿಕಾರಿಗಳಿಗೆ ಗೌರವ ಮತ್ತು ಪ್ರೋತ್ಸಾಹ ನೀಡಬೇಕು.

ಮುಂದಿನ ಪೀಳಿಗೆಗೆ ಪ್ರಾಚೀನ ಸ್ಮಾರಕಗಳ ಬಗ್ಗೆ ತಿಳಿಸಿಕೊಡಲು ಸಂರಕ್ಷಣೆ ಮಾಡಬೇಕು. ಆಧುನಿಕತೆ ಹೆಸರಿನಲ್ಲಿ ಇದೆಲ್ಲದರ ಅವನತಿಯಾಗುತ್ತಿದೆ. ಆದ್ದರಿಂದ ಇವುಗಳ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯ.

FOR KANNADA
ಕನ್ನಡದಲ್ಲಿ ಮಾಹಿತಿ